ಸಂಯುಕ್ತ ಕರ್ನಾಟಕ

# ಅನಂತಮೂರ್ತಿಗೆ ವಿದ್ಯಾರ್ಥಿಗಳ ಸವಿಸ್ಕಾರ ನಮನ

ಕನ್ನಡ ನಾಡಿನ ಹೆಮ್ಮೆಯ ಸಾಹಿತಿ ಡಾ. ಯು.ಆರ್. ಅನಂತಮೂರ್ತಿ ಅವರಿಗೆ ಹಾಗೂ ಅವರು ಕನ್ನಡ ನಾಡಿಗೆ ನೀಡಿದಂತಹ ಮರೆಯಲಾರದ ಕೊಡುಗೆಯ ಸ್ಮರಣಾರ್ಥ ಅವರಿಗೆ ಒಂದು ಅಭೂತಪೂರ್ವ ನಮನ ಸಲ್ಲಿಸಿದರು.

ಅವರು ಬರವಣಿಗೆ, ವಿಮರ್ಶೆಗಳು ಹಾಗೂ ಅವರಲ್ಲಿ ಅಡಗಿದ್ದ ಅಗಾಧವಾದ ಜ್ಞಾನದ ಕೊರತೆ ಕಾಡುತ್ತಿರುವ ಈ ಸಂಧರ್ಭದಲ್ಲಿ ನಗರದ ಜೈನ್ ಕಾಲೇಜಿನ ವಿದ್ಯಾರ್ಥಿಗಳು ಅವರ ನೆನೆಪಿನಲ್ಲಿ ಆಯೋಜಿಸಿದ್ದ 'ಸವಿಸ್ಕಾರ' ಎಂಬ ಈ ಪ್ರದರ್ಶನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಕಾಲೇಜಿನ ಭಾಷಾ ವಿದ್ಯಾರ್ಥಿಗಳು ಅವರ ಭಾವಚಿತ್ರಗಳು ಅವರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಬರೆದು ಎಲ್ಲ ಪ್ರದರ್ಶಿಸಿದರು. ಮಹಾರಾಣಿ ಅಮ್ಮಣ್ಣಿ ವಿಜ್ಞಾನ ಕಾಲೇಜು, ದಯಾನಂದ ಸಾಗರ ಕಾಲೇಜು, ಮೌಂಟ್ ಕಾರ್ಮೆಲ್ ಸೇರಿದಂತೆ ನಗರದ ಸುಮಾರು 10 ಕಾಲೇಜಿನ ವಿದ್ಯಾರ್ಥಿಗಳು ಈ ಮೇಳದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

ಇಲ್ಲಿನ ಮತ್ತೊಂದು ಪ್ರಮುಖ ಆಕರ್ಷಣೆ ಎಂದರೆ ಫಾರೆನ್ಸಿಕ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳು ತಯಾರಿಸಿದ್ದ ಮಾಡೆಲ್‌ಗಳ ಪ್ರದರ್ಶನ!ನರಹತ್ಯೆಅಪರಾಧಗಳದೃಶ್ಯದಿಂದ ಹಿಡಿದು ಬೆರಳಚ್ಚು ಸಂಗ್ರಹ,ಟೈರ್ ಮುದ್ರಣ ಮುಂತಾದವುಗಳ ಮೂಲಕ ಹೇಗೆ ನಿಜವಾದ ಅಫರಾಧಿಗಳನ್ನು ಗುರುತಿಸಬಹುದು ಎಂಬ ವಿಷಯದ ಕುರಿತು ಪ್ರತಿಕೃತಿಯನ್ನು ವಿದ್ಯಾರ್ಥಿಗಳು ಇಲ್ಲಿ ಪ್ರದರ್ಶಿಸಿದರು.



ಫಾರೆನ್ಸಿಕ್ ವಿಷಯವು ತುಂಬ ಆಸಕ್ತಿದಾಯಕವಾಗಿದ್ದು, ಅದನ್ನು ವೃತ್ತಿಪರತೆ ವಿಷಯವಾಗಿ ವಿದ್ಯಾರ್ಥಿನಿಯರು ತೆಗೆದುಕೊಳ್ಳುತ್ತಿಲ್ಲ ಎನ್ನುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ.

ಇಂದಿನ ಕಾಲದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಪ್ರತಿ ಹಂತದಲ್ಲೂ ಬೇಕು. ಅದರಲ್ಲೂ ಫಾರೆನ್ಸಿಕ್ ಸೈನ್ಸ್ ಎಂಬ ವಿಷಯ ಅವರ ಬದುಕಿನ ಹಾದಿಯನ್ನೇ ಬದಲಾಯಿಸುವ ಸಾಧ್ಯತೆ ಇದೆ. ಮನೆಯಲ್ಲಿ ಹೆಣ್ಣುಮಕ್ಕಳಿಗೆ ಎಲ್ಲ ರೀತಿಯ ಪ್ರೋತ್ಸಾಹ ದೊರೆತರೆ ಅವಳ ಏನು ಬೇಕಾದರೂ ಸಾಧಿಸಿ ತೋರಿಸುತ್ತಾಳೆ ಎಂಬುದು ಇಲ್ಲಿನ ವಿದ್ಯಾರ್ಥಿಗಳ ಅಭಿಪ್ರಾಯವಾಗಿದ್ದು ವಿಶೇಷವಾಗಿತ್ತು.

ಇನ್ನು ಹೋವರ್ ಕ್ರಾಫ್ಟ್ ಯಾಂತ್ರಿಕ ಶೈಲಿಯ ಚಲನಚಿತ್ರ ಪ್ರದರ್ಶನ ಕೂಡ ಎಲ್ಲರ ಗಮನ ಸೆಳೆಯುವಲ್ಲಿಯಶಸ್ವಿಯಾಯಿತು ವಾಯುವೇಗವನ್ನು ಅಳೆಯಲು ಪೈಲೆಟ್‌ಗಳು ಹಾಗೂ ಮೆಟಿರಿಯೋಲಾಜಿಸ್ಟ್ ಉಪಯೋಗಿಸುವ ಅನೆಮೊಮೀಟರ್‌ನ ಪ್ರತಿಕೃತಿ ಕೂಡ ಈ ಪ್ರದರ್ಶನದ ಭಾಗವಾಗಿತ್ತು.

ಇವೆಲ್ಲದರ ಜೊತೆ,ಕೈಬರಹ ವಿಶ್ಲೇಷಣೆ ದೇಹದ ದ್ರವ್ಯಸೂಚಿಯನ್ನು ನಿರ್ಧರಿಸುವ ಸಾಧನ, ಬೆಂಗಳೂರಿನ ಸಾಂಸ್ಕೃತಿಕ ಚಿತ್ರಪ್ರದರ್ಶನ ಎಲ್ಲವು ಸವಿಸ್ಕಾರಕ್ಕೆ ಮತ್ತಷ್ಟು ರಂಗನ್ನು ನೀಡಿದವು.

